**೧೨. ನೀಡಿರುವ ರಿಯಾಯತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳು (ಕಲಂ ೪ (೧) (ಬಿ) (XIII):**

ಕನ್ನಡ ಸಾಹಿತ್ಯ ಪರಿಷತ್ತಿನ ನಿಯಮ–ನಿಬಂಧನೆಗಳಲ್ಲಿನ ನಿಯಮ ಸಂಖ್ಯೆ (೬) ಉಪನಿಯಮ (೨), ಖಂಡ (ಎ)ರಲ್ಲಿ ಪರಿಷತ್ತಿನ ಅಜೀವ ಸದಸ್ಯತ್ವ ಪಡೆಯಲು ಅವರು ಸಲ್ಲಿಸಬೇಕಾದ ಶುಲ್ಕವನ್ನು ಶುಲ್ಕರಹಿತವಾಗಿ (ಉಚಿತ) ನೀಡಲು ಈ ಕೆಳಕಂಡಂತೆ ನಿಯಮದಲ್ಲಿ ಅವಕಾಶ ಕಲ್ಪಿಸಿಕೊಡಲಾಗಿದೆ.

"(ಎ) ಭಾರತೀಯ ಸೇನೆ, ಅರೆಸೇನೆಯಲ್ಲಿ ಸೇವೆ ಸಲ್ಲಸುತ್ತಿರುವ/ನಿವೃತ್ತರಾಗಿರುವ ಕನ್ನಡ ಸೈನಿಕರಿಗೆ ಹಾಗೂ ದಿವ್ಯಾಂಗ ಚೇತರಿಗೆ ಆಜೀವ ಸದಸ್ಯತ್ವವನ್ನು ಮತ್ತು ಸ್ಮಾರ್ಟ್‌ಕಾರ್ಡ್‌ನ್ನು ಶುಲ್ಕರಹಿತ (ಉಚಿತ)ವಾಗಿ ನೀಡತಕ್ಕದ್ದು."

ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಪರಿಷತ್ತಿಗೆ ಸಂಬಂಧಿಸಿದಂತೆ ಸಭಾಂಗಣಗಳು ಸಾರ್ವಜನಿಕರು, ಸಾಹಿತ್ಯಾಸಕ್ತರು, ಕಲಾವಿದರುಗಳು, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ೦೩ ರೀತಿಯ ಸಭಾಂಗಣಗಳು ಬಾಡಿಗೆಗೆ ಲಭ್ಯವಿರುತ್ತದೆ. ಅವುಗಳೆಂದರೆ ೧) ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ ೨) ಅಕ್ಕಮಹಾದೇವಿ ಸಭಾಂಗಣ ೩) ಕುವೆಂಪು ಸಭಾಂಗಣ. ಸಭಾ ಮಂಟಪದ ನಿಯಮಗಳಿಗನುಗುಣವಾಗಿ ಕಾರ್ಯಕ್ರಮಗಳಿಗೆ ಸಭಾಂಗಣಗಳನ್ನು ಬಾಡಿಗೆಗೆ ನೀಡಲಾಗುವುದು. ಸಭಾಮಂಟಪದ ಅಪೇಕ್ಷಾ ಪತ್ರ ಮತ್ತು ಸಭಾಮಂಟಪದ ನಿಯಮಗಳು ಈ ಕೆಳಕಂಡಂತೆ ಇರುತ್ತವೆ. ಅರ್ಜಿದಾರರು ಭರ್ತಿ ಮಾಡಿದ ಸಭಾಮಂಟಪದ ಅಪೇಕ್ಷಾ ಪತ್ರವನ್ನು ನಿಯಮಗಳಿಗೆ ಅನುಸಾರವಾಗಿ ಸಲ್ಲಿಸಿ, ಕಾಯ್ದಿರಿಸಬೇಕಾಗುತ್ತದೆ.

# ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿರಸ್ತೆ, ಚಾಮರಾಜಪೇಟೆ, ಬೆಂಗಳೂರು –೫೬೦ ೦೧೮

ದೂರವಾಣಿ : ೦೮೦–೨೬೬೨೩೫೮೪, ೨೬೬೧೨೯೯೧, ೨೬೬೭೨೯೯೨, ೨೨೪೨೩೮೬೭

ಸ್ಥಾಪನೆ ೧೯೧೫


## ಸಭಾಮಂಟಪದ ಅಪೇಕ್ಷಾ ಪತ್ರ

**ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರ / ಅಕ್ಕಮಹಾದೇವಿ ಸಭಾಂಗಣ / ಕುವೆಂಪು ಸಭಾಂಗಣ**

---

೧. ಸಂಸ್ಥೆಯ/ ವ್ಯಕ್ತಿಯ ಹೆಸರು :
ಮತ್ತು ಪೂರ್ಣ ಅಂಚೆ ವಿಳಾಸ

**ದೂರವಾಣಿ ಸಂಖ್ಯೆ:**

---

೨. ಪರಿಷತ್ತಿನ ಸದಸ್ಯ ಸಂಸ್ಥೆಯಾಗಿದ್ದಲ್ಲಿ
ಸದಸ್ಯತ್ವ ಸಂಖ್ಯೆ :

---

೩. ಸಭಾಂಗಣ ಬೇಕಾದ ದಿನಾಂಕ ಮತ್ತು :
ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ

---

೪. ಸಭಾಂಗಣದಲ್ಲಿ ನಡೆಸಬೇಕೆಂದಿರುವ :
ಕಾರ್ಯಕ್ರಮದ ವಿವರ

---

೫. ಪ್ರವೇಶವು ಉಚಿತವೆ, ಹಣದ ಮೂಲಕವೇ? :
ಪ್ರವೇಶಪತ್ರದ ಬೆಲೆ ಎಷ್ಟು? ರೂ...............ರಿಂದ
...............ವರೆಗೆ

---

೬. ಪಾನ್ ಕಾರ್ಡ್ ಸಂಖ್ಯೆ :

---

ನಾವು/ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಮಂಟಪದ ಉಪಯೋಗಕ್ಕೆ ಸಂಬಂಧಪಟ್ಟ ಅಪೇಕ್ಷಾ ಪತ್ರ ಹಿಂಬದಿಯ ಸಂಪೂರ್ಣ ನಿಯಮಗಳನ್ನು ಓದಿ, ಒಪ್ಪಿ, ಆ ನಿಯಮಗಳಿಗೊಳಪಟ್ಟು ಸಭಾಮಂಟಪದ ಉಪಯೋಗವನ್ನು ಪಡೆಯಲಿಚ್ಛಿಸುತ್ತೇವೆ/ನೆ.

ದಿನಾಂಕ.......................... ಸಹಿ....................................

---

**ಬಾಡಿಗೆ :**

ಬಾಡಿಗೆ ಮೊತ್ತ ರೂ. .................................... ಎಲ್. ಇ. ಡಿ ಶುಲ್ಕ.......................................
ಸ್ವಚ್ಛತಾ ಶುಲ್ಕ ರೂ. .................................... ಠೇವಣಿ ಮೊತ್ತ ರೂ.....................................
ಜಿ.ಎಸ್.ಟಿ ೧೮% ಶುಲ್ಕ ................................ **ಒಟ್ಟು ಮೊತ್ತ ರೂ.**....................................

**ಗೌರವ ಕಾರ್ಯದರ್ಶಿ** **ಅಧ್ಯಕ್ಷರು**

---

**ಕಛೇರಿ ಉಪಯೋಗಕ್ಕೆ –**

ಪಾವತಿಸಿದ ಮೊತ್ತ ಮತ್ತು ರಸೀದಿ ವಿವರ :
ಕೇಳಿರುವ ದಿನ ಖಾಲಿ ಇದೆ. ಸಭಾಮಂಟಪವನ್ನು ಕೊಡಬಹುದು.

**ವಿಷಯ ನಿರ್ವಾಹಕರ ಸಹಿ** **ವ್ಯವಸ್ಥಾಪಕರು**

---

## ಸಭಾಮಂಟಪದ ನಿಯಮಗಳು

೧. ಕನ್ನಡೇತರ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಅವಕಾಶವಿರುವುದಿಲ್ಲ.

೨. ಸಭಾಮಂಟಪದಲ್ಲಿ ನಡೆಯುವ ಕಾರ್ಯಕ್ರಮವು ಪರಿಷತ್ತಿನ ಉದ್ದೇಶಗಳಿಗೆ ವಿರೋಧವಾಗಿರಬಾರದು. ಅದು ಉಪನ್ಯಾಸ, ಚರ್ಚೆ, ನಾಟಕ, ಕುಶಲಕಲೆ, ಚಿತ್ರಪ್ರದರ್ಶನ, ಕೀರ್ತನೆ– ಮೊದಲಾದ ಎಲ್ಲ ಬಗೆಯ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮವಾಗಲಿ, ಸಾಹಿತ್ಯಕ್ಕೆ ಪ್ರಯೋಜನ ಕಾರ್ಯಕ್ರಮವಾಗಿರಬೇಕು.

೩. ಕನ್ನಡ ಸಾಹಿತ್ಯ, ಸಂಸ್ಕೃತಿಯ ಘನತೆಗೆ ದಕ್ಕೆಯಾದಲ್ಲಿ ಅಥವಾ ಅಪಚಾರವಾದಲ್ಲಿ ಅಂತಹವರ ಠೇವಣಿ ಮುಟ್ಟುಗೋಲು ಹಾಕಿಕೊಳ್ಳುವುದು ಮತ್ತು ಮುಂದಿನ ದಿನಗಳಲ್ಲಿ ಅಂತಹವರಿಗೆ ಬಾಡಿಗೆಗೆ ನೀಡುವುದಿಲ್ಲ. ಅದಕ್ಕೆ ನೇರವಾಗಿ ಸಬಂಧಪಟ್ಟವರೇ ಹೊಣೆಗಾರರಾಗಿರುತ್ತಾರೆ.

೪. ಕಾರ್ಯಕ್ರಮದಿಂದ ನೆರೆಹೊರೆಯವರಿಗೆ ಸದ್ದುಗದ್ದಲ, ಹೊಗೆ, ವಾಸನೆ ಮುಂತಾದ ಅನಾನುಕೂಲಗಳಾಗಬಾರದು. ಸಭಾಮಂಟಪದ ಗೋಡೆಗಳು, ರಂಗಸಲಕರಣೆಗಳಿಗೆ ಮೊಳೆ, ಬೆಂಕಿ, ಹೊಗೆ, ಅಂಟು, ಬಣ್ಣ ಮೊದಲಾದವುಗಳಿಂದ ಯಾವ ಬಗೆಯ ಅಪಾಯವೂ, ವಿಕಾರವೂ ಆಗಬಾರದು. ಪೀಠೋಪಕರಣಗಳಿಗೆ ಹಾನಿಯಾಗದಂತೆ ಜಾಗರೂಕತೆಯಿಂದ ಉಪಯೋಗಿಸಬೇಕು. ಸಭಾಂಗಣವನ್ನು ಪರಿಷತ್ತಿಗೆ ಸುಸ್ಥಿತಿಯಲ್ಲಿ ಬಿಟ್ಟುಕೊಟ್ಟಲ್ಲಿ ಮಾತ್ರ ಠೇವಣಿ ಮರುಪಾವತಿ ಮಾಡಲಾಗುವುದು. ಇಲ್ಲವಾದಲ್ಲಿ ಹಾನಿಯಾದ ವಸ್ತುವಿನ ಬೆಲೆಯನ್ನು ಠೇವಣಿ ಹಣದಲ್ಲಿ ಕಟಾವು ಮಾಡುವುದು. ಠೇವಣಿ ಹಣವನ್ನು ಕಚೇರಿ ಕೆಲಸದ ೧ ತಿಂಗಳ ಅವಧಿಯಲ್ಲಿ ಸಂಬಂಧಿಸಿದವರಿಗೆ ಮರುಪಾವತಿ ಮಾಡಬೇಕು. ಈ ಸಂಬಂಧ ಅರ್ಜಿಯ ಜೊತೆಗೆ ಸಂಬಂಧಿಸಿದವರಿಂದ ಬ್ಯಾಂಕ್ ಖಾತೆ ಮತ್ತು ಪಾನ್‌ಕಾರ್ಡ್ ಮಾಹಿತಿ ಪಡೆಯುವುದು.

೫. ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರದ ಬಾಡಿಗೆ ಮೊತ್ತದ ಜೊತೆ ಭದ್ರತೆ ಮತ್ತು ಸುರಕ್ಷತೆ ದೃಷ್ಟಿಯಲ್ಲಿ ಠೇವಣಿ **ರೂ. ೧೦,೦೦೦–೦೦** ನೀಡುವುದು. ಹಾಗೂ ಬಾಡಿಗೆ ದರದ ಮೇಲೆ ಜಿ ಎಸ್ ಟಿ **೧೮%** ಪ್ರತ್ಯೇಕವಾಗಿ ನೀಡುವುದು. ಎಲ್.ಇ.ಡಿ. ಶುಲ್ಕವಾಗಿ ಅರ್ಧ ದಿನಕ್ಕೆ ೨೦೦೦–೦೦ ಪೂರ್ತಿದಿನಕ್ಕೆ ೪೦೦೦–೦೦ ಜಿ ಎಸ್ ಟಿ **೧೮%** ಪ್ರತ್ಯೇಕವಾಗಿ ನೀಡುವುದು.

೬. ಪ್ರವೇಶ ಶುಲ್ಕ ಪಡೆದು ನಿಯೋಜನೆ ಮಾಡುವ ಕಾರ್ಯಕ್ರಮಗಳಿಗೆ ಬಾಡಿಗೆ ಜೊತೆಗೆ ಒಟ್ಟು ರಸೀದಿ (ಟಿಕೇಟ್)ನಲ್ಲಿ ಸಂಗ್ರಹವಾದ ಮೊತ್ತದಲ್ಲಿ **೨೫% ರಾಯಧನ** ಪರಿಷತ್ತು ಪಡೆದುಕೊಳ್ಳುವುದು. **ಐ.ಪಿ.ಆರ್.ಎಸ್ ಗೆ** ಸಂಬಂಧಿಸಿದ **ಸರ್ಟೀಫಿಕೇಟನ್ನು** ಆಯೋಜಕರು ಪಡೆದುಕೊಳ್ಳುವುದು.

೭. ಆಯೋಜಕರು ನಿಗದಿಗೊಳಿಸಿರುವ ಕಾರ್ಯಕ್ರಮವನ್ನು ರದ್ದುಗೊಳಿಸುವ ಸಂಬಂಧ ಯಾವುದೇ **ಸೂಚನೆ / ತಿಳುವಳಿಕೆ** ನೀಡದೇ ಅತ್ಯಂತ ತುರ್ತು ಸಂದರ್ಭವೆಂದು ಪರಿಷತ್ತು ಪರಿಗಣಿಸಿ ಕಾರ್ಯಕ್ರಮ ರದ್ದುಪಡಿಸಬಹುದು.

೮. ಸಭಾಂಗಣದ ಒಳಗಡೆ ತಿಂಡಿ ತಿನ್ನಲು ಅವಕಾಶವಿರುವುದಿಲ್ಲ. ನಿಯಮ ಮೀರಿದಲ್ಲಿ ಪ್ರತಿಯೊಬ್ಬರಿಗೆ **ರೂ. ೧೦೦–೦೦ ಆಯೋಜಕರಿಂದಲೇ ದಂಡ** ಪಡೆದುಕೊಳ್ಳುವುದು. ನೀಡದೇ ಇದ್ದಲ್ಲಿ ಆಯೋಜಕರ ಠೇವಣಿಯಲ್ಲಿ ಕಡಿತ ಮಾಡಲಾಗುವುದು.

೯. ವಿದ್ಯುತ್ ಕಡಿತದಿಂದಾಗಿ ಜನರೇಟರ್ ಉಪಯೋಗಕ್ಕಾಗಿ ೧ ಘಂಟೆಗೆ ರೂ.೧,೦೦೦–೦೦ ಪಡೆದುಕೊಳ್ಳುವುದು. ನಂತರದ ಹೆಚ್ಚುವರಿ ಬಳಕೆಗೆ ಪ್ರತಿ ಒಂದು ಘಂಟೆಗೆ ರೂ ೭೦೦–೦೦ ರಂತೆ ಹೆಚ್ಚುವರಿ ಶುಲ್ಕ ಪಡೆದುಕೊಳ್ಳುವುದು.

೧೦. ಒಳಾಂಗಣ ಸ್ವಚ್ಛತಾ ಶುಲ್ಕ ರೂ.೨೦೦=೦೦ ಊಟ, ಉಪಹಾರದ ವ್ಯವಸ್ಥೆ ಆವರಣದಲ್ಲಿ ಮಾಡಿದ್ದಲ್ಲಿ ಹೆಚ್ಚುವರಿ ೩೦೦–೦೦ ನೀಡುವುದು.

೧೧. ಚಲನಚಿತ್ರ, ದೂರದರ್ಶನ, ಧಾರಾವಾಹಿ, ಸಾಕ್ಷ್ಯಚಿತ್ರ ಚಿತ್ರೀಕರಣ ಇತ್ಯಾದಿ ಸಂದರ್ಭದಲ್ಲಿ ದಿನದ ಬಾಡಿಗೆ, ಹಾಗೂ ಠೇವಣಿ ಹಣವನ್ನು **ಸಂದರ್ಭಾನುಸಾರ ನಿರ್ಣಯಿಸಲಾಗುವುದು.** (ಪರಿಷತ್ತಿನ ಯಾವುದೇ ಸಭಾಂಗಣ/ಭಾಗಕ್ಕೆ ಇದು ಅನ್ವಯಿಸುತ್ತದೆ).

೧೨. ಪರಿಷತ್ತಿನ ಸದಸ್ಯ **ಅಂಗಸಂಸ್ಥೆಗಳಿಗೆ** ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರ ಬಾಡಿಗೆ ಮೊತ್ತದಲ್ಲಿ ೧೦% ರಿಯಾಯಿತಿ ಕುವೆಂಪು ಸಭಾಂಗಣ ರೂ ೨೦೦–೦೦ ಮತ್ತು ಅಕ್ಕಮಹಾದೇವಿ ಸಭಾಂಗಣದಲ್ಲಿ ರೂ ೫೦೦–೦೦ ರಿಯಾಯಿತಿ ನೀಡಲಾಗುವುದು.

೧೩. ಸಭಾಮಂಟಪವನ್ನು ಸದಸ್ಯ ಸಂಸ್ಥೆಯು ಅಪೇಕ್ಷಿಸಿದಾಗ ಸಂಬಂಧಪಟ್ಟ ದಿನದ ಕಾರ್ಯಕ್ರಮದ ಪ್ರಕಟಣೆಗಳು ಆ ಸಂಸ್ಥೆಯ ಹೆಸರಿನಲ್ಲೇ ಇರಬೇಕು. ಬೇರೆ ಸಂಸ್ಥೆಯವರು ಆ ಸದಸ್ಯ ಸಂಸ್ಥೆಯ ರಿಯಾಯಿತಿಯನ್ನು ಉಪಯೋಗಿಸಿಕೊಳ್ಳಲು ಅವಕಾಶವಿಲ್ಲ.

೧೪. ಒಂದು ಸಂಸ್ಥೆಯ/ ವ್ಯಕ್ತಿಯ ಹೆಸರಿನಲ್ಲಿ ಕಾಯ್ದಿರಿಸಿದ ಸಭಾಂಗಣವನ್ನು ಬೇರೆ ಸಂಸ್ಥೆ / ವ್ಯಕ್ತಿಗಳು ಉಪಯೋಗಿಸಿಕೊಳ್ಳಲು ಅವಕಾಶವಿಲ್ಲ.

೧೫. ಪರಿಷತ್ತಿನಲ್ಲಿರುವ ಧ್ವನಿವರ್ಧಕ ಕೆಟ್ಟು ಹೋದ ಸಂದರ್ಭವನ್ನು ಹೊರತುಪಡಿಸಿ ಸಂದರ್ಭಗಳಲ್ಲಿ ಬೇರೆ ಧ್ವನಿವರ್ಧಕವನ್ನು ನಿಷೇಧಿಸಲಾಗಿದೆ.

೧೬. ಸಭಾಮಂಟಪದ ದೀಪ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ಮಾಡುವುದನ್ನು ನಿಷೇಧಿಸಲಾಗಿದೆ. ಅಧಿಕ ವಿದ್ಯುತ್ ವ್ಯವಸ್ಥೆ ಮಾಡಿಕೊಳ್ಳುವ ಅಗತ್ಯವಿದ್ದಲ್ಲಿ ಪರಿಷತ್ತಿನಿಂದ ಲಿಖಿತ ಒಪ್ಪಿಗೆಯನ್ನು ಪಡೆಯಬೇಕು. ಅದಕ್ಕೆ ಅಧಿಕ ವಿದ್ಯುಚ್ಛಕ್ತಿ ವೆಚ್ಚ ನೀಡಬೇಕು. ಕಟ್ಟಡಕ್ಕೆ ದೀಪಾಲಂಕಾರ ನಿಷೇಧಿಸಿದೆ.

೧೭. ಕಾರ್ಯಕ್ರಮಗಳಿಗೆ ಪೊಲೀಸು ಮೊದಲಾದ ಅಧಿಕಾರಿಗಳಿಂದ ಅವಶ್ಯಕವಾದ ಪೂರ್ವಾನುಮತಿ ಪಡೆಯುವ ಜವಾಬ್ದಾರಿ ಸಂಬಂಧಪಟ್ಟವರ ಜವಾಬ್ದಾರಿಯಾಗಿರುತ್ತದೆ.

೧೮. **ಸಭಾಂಗಣ ಬಾಡಿಗೆಗೆ ಪಡೆಯುವವರು ೧ ಬಾರಿಗೆ ಮಾತ್ರ ಮುಂದೂಡಲು ಅವಕಾಶವಿರುತ್ತದೆ.** ೨ನೇ ಬಾರಿ ಕಾರ್ಯಕ್ರಮದ ಮುಂದೂಡಿಕೆಗೆ ಅವಕಾಶವಿಲ್ಲ. ಮುಂದೂಡಿದ್ದಲ್ಲಿ ಕನಿಷ್ಠ ಒಂದು ತಿಂಗಳ ಮುಂಚಿತವಾಗಿ ತಿಳಿಸಿದರೆ – ಶೇಕಡ ೨೦, ಹದಿನೈದು ದಿನ ಮುಂಚಿತವಾಗಿ ತಿಳಿಸಿದರೆ – ಶೇ ೩೦, ಹದಿನೈದು ದಿನಗಳಿಗಿಂತ ಕಡಿಮೆ ಅವಧಿಯಲ್ಲಿ ತಿಳಿಸಿದರೆ – ಶೇ ೫೦. ನಿಗದಿಪಡಿಸಿದ ಬಾಡಿಗೆಯನ್ನು ಠೇವಣಿ ಮೊತ್ತದಲ್ಲಿ ಕಡಿತ ಮಾಡಲಾಗುತ್ತದೆ.

೧೯. **ಕಾರ್ಯಕ್ರಮವನ್ನು ರದ್ದುಪಡಿಸಿದ ಸಂದರ್ಭದಲ್ಲಿ,** ಒಂದು ತಿಂಗಳ ಮುಂಚಿತವಾಗಿ – ಶೇ ೨೦, ಹದಿನೈದು ದಿನ ಮುಂಚಿತವಾಗಿ – ಶೇ ೩೦, ಹದಿನೈದು ದಿನಗಳಿಗಿಂತ ಕಡಿಮೆ ಅವಧಿ – ಶೇ ೫೦ ರಷ್ಟು ಬಾಡಿಗೆ ಹಣವನ್ನು ಹಿಡಿದುಕೊಂಡು ಠೇವಣಿಯಲ್ಲಿ ಉಳಿಕೆ ಮೊತ್ತವನ್ನು ಹಿಂದಿರುಗಿಸಲಾಗುವುದು.

೨೦. ಕಾರ್ಯಕ್ರಮ ದಿನಪೂರ್ತಿ ನಿಗದಿಗೊಳಿಸಿದಲ್ಲಿ ಬೆಳಗ್ಗೆ ೯–೦೦ ರಿಂದ ರಾತ್ರಿ ೯–೦೦ರವರೆಗೆ, ಕಾರ್ಯಕ್ರಮವು ಅರ್ಧ ದಿನವೆಂದು ನಿಗದಿಗೊಳಿಸಿದಲ್ಲಿ ಬೆಳಗ್ಗೆ ೯–೦೦ ರಿಂದ ಮಧ್ಯಾಹ್ನ ೨–೦೦ರವರೆಗೆ / ಮಧ್ಯಾಹ್ನ ೩–೦೦ ರಿಂದ ರಾತ್ರಿ ೯–೦೦ರವರೆಗೆ ಈ ನಿಗದಿತ ಅವಧಿಯೊಳಗೆ ಕಾರ್ಯಕ್ರಮ ಮುಗಿಯಬೇಕು. ರಾತ್ರಿ ೯–೦೦ ಗಂಟೆಯ ನಂತರ ಯಾವ ಕಾರ್ಯಕ್ರಮಗಳನ್ನೂ ಜರುಗಿಸುವಂತಿಲ್ಲ.

೨೧. ಠೇವಣಿ ಹಣವನ್ನು ಮುಂದಿನ ಬೇರೆ ಕಾರ್ಯಕ್ರಮಗಳಿಗೆ (ವರ್ಗಾವಣೆ) ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ.

೨೨. ದೂರವಾಣಿ ಮತ್ತು ಮೌಖಿಕವಾಗಿ ತಿಳಿಸಿದರೆ ಸಭಾಂಗಣವನ್ನು ಕಾಯ್ದಿರಿಸಲಾಗುವುದಿಲ್ಲ. ಹಣ ಪಾವತಿಸಿ ರಸೀತಿ ಪಡೆದವರಿಗೆ ಮಾತ್ರ ಕಾಯ್ದಿರಿಸಲಾಗುವುದು.

೨೩. ಅಪೇಕ್ಷಕ ವ್ಯಕ್ತಿ/ ಸಂಸ್ಥೆಯು ಸಭಾಮಂಟಪದಲ್ಲಿ ನಡೆಸಬೇಕೆಂದಿರುವ ಕಾರ್ಯಕ್ರಮಗಳನ್ನು ಪರಿಷತ್ತಿನ ಮೇಲ್ವಿಚಾರಣೆಗೊಳಪಟ್ಟು ಅದರ ಸಲಹೆಯಂತೆ ನಡೆಸತಕ್ಕದ್ದು.

೨೪. ಈ ನಿಯಮಗಳಲ್ಲಿ ಕಾಣದಿರುವ ಹೆಚ್ಚಿನ ಸಂಗತಿ ಯಾವುದಾದರೂ ಒದಗಿದರೆ, ಆಗಿನ ನಡವಳಿಕೆಯ ಬಗ್ಗೆ ಅಪೇಕ್ಷಕರು ಪರಿಷತ್ತಿನ ಅಧಿಕಾರಿಗಳ ಸೂಚನೆಯಂತೆ ನಡೆಯಬೇಕು. ಸಭಾಮಂಟಪಕ್ಕೆ ಸಂಬಂಧಪಟ್ಟ ವ್ಯವಹಾರಗಳಲ್ಲಿ ಪರಿಷತ್ತಿನ ತೀರ್ಮಾನವೇ ಅಂತಿಮ.

**(ತೀರ್ಮಾನಿಸುವ ಅಧಿಕಾರ – ಮಾನ್ಯ ಅಧ್ಯಕ್ಷರು)**

ಸಭಾಂಗಣಗಳ ಬಾಡಿಗೆ ವಿವರಗಳು ಈ ಕೆಳಕಂಡಂತೆ ನಿಗದಿ ಪಡಿಸಲಾಗಿದೆ.

## ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರ

| ಸೋಮವಾರದಿಂದ ಶುಕ್ರವಾರದೊರಗೆ | ಬಾಡಿಗೆ | ಎಲ್ಇಡಿ | ಒಳಾಂಗಣ ಸ್ವಚ್ಛತೆ | ಜಿ ಎಸ್ ಟಿ ೧೮% | ಠೇವಣಿ | ಒಟ್ಟು | ತಿಂಡಿ ವ್ಯವಸ್ಥೆ ಸ್ವಚ್ಛತೆ |
|---|---|---|---|---|---|---|---|
| ಪೂರ್ತಿದಿನ ಬೆ. ೯.೦೦–೯.೦೦ | ೧೫,೦೦೦ | ೪೦೦೦ | ೨೦೦ | ೩೪೫೬ | ೧೦,೦೦೦ | ೩೨,೬೫೬ | ೩೦೦ |
| ಅರ್ಧದಿನ ಬೆ ೯.೦೦–೨.೦೦ ಮ ೩.೦೦–೯.೦೦ | ೭,೦೦೦ | ೨೦೦೦ | ೨೦೦ | ೧೬೫೬ | ೧೦,೦೦೦ | ೨೦,೮೫೬ | ೩೦೦ |

**ರಜಾದಿನ/ವಾರಾಂತ್ಯ**

| | | | | | | | |
|---|---|---|---|---|---|---|---|
| ಪೂರ್ತಿದಿನ ಬೆ. ೯.೦೦–೯.೦೦ | ೨೦,೦೦೦ | ೪೦೦೦ | ೨೦೦ | ೪೩೫೬ | ೧೦,೦೦೦ | ೩೮,೫೫೬ | ೩೦೦ |
| ಅರ್ಧದಿನ ಬೆ ೯.೦೦–೨.೦೦ ಮ ೩.೦೦–೯.೦೦ | ೧೦,೦೦೦ | ೨೦೦೦ | ೨೦೦ | ೨೧೯೬ | ೧೦,೦೦೦ | ೨೪,೩೯೬ | ೩೦೦ |

## ಅಕ್ಕಮಹಾದೇವಿ ಸಭಾಂಗಣ

| ಸೋಮವಾರದಿಂದ ಶುಕ್ರವಾರದೊರಗೆ | ಬಾಡಿಗೆ | ಒಳಾಂಗಣ ಸ್ವಚ್ಛತೆ | ಜಿ ಎಸ್ ಟಿ ೧೮% | ಶೇವಣಿ | ಒಟ್ಟು | ತಿಂಡಿ ವ್ಯವಸ್ಥೆ ಸ್ವಚ್ಛತೆ |
|---|---|---|---|---|---|---|
| ಪೂರ್ತಿದಿನ ಬೆ. ೯.೦೦–೯.೦೦ | ೪,೦೦೦ | ೨೦೦ | ೭೫೬ | ೨,೦೦೦ | ೬೯೫೬ | ೩೦೦ |
| ಅರ್ಧದಿನ ಬೆ ೯.೦೦–೨.೦೦ ಮ ೩.೦೦–೯.೦೦ | ೨,೦೦೦ | ೨೦೦ | ೩೯೬ | ೨,೦೦೦ | ೪೫೯೬ | ೩೦೦ |
| ರಜಾದಿನ/ವಾರಾಂತ್ಯ | | | | | | |
| ಪೂರ್ತಿದಿನ ಬೆ. ೯.೦೦–೯.೦೦ | ೫,೫೦೦ | ೨೦೦ | ೧೦೨೬ | ೨,೦೦೦ | ೮,೭೨೬ | ೩೦೦ |
| ಅರ್ಧದಿನ ಬೆ ೯.೦೦–೨.೦೦ ಮ ೩.೦೦–೯.೦೦ | ೩,೦೦೦ | ೨೦೦ | ೫೭೬ | ೨,೦೦೦ | ೫,೭೭೬ | ೩೦೦ |

## ಕುವೆಂಪು ಸಭಾಂಗಣ

| ಸೋಮವಾರದಿಂದ ಶುಕ್ರವಾರದೊರಗೆ | ಬಾಡಿಗೆ | ಒಳಾಂಗಣ ಸ್ವಚ್ಛತೆ | ಜಿ ಎಸ್ ಟಿ ೧೮% | ಶೇವಣಿ | ಒಟ್ಟು | ತಿಂಡಿ ವ್ಯವಸ್ಥೆ ಸ್ವಚ್ಛತೆ |
|---|---|---|---|---|---|---|
| ಅರ್ಧದಿನ ಸಂ. ೫.೩೦–೯.೦೦ | ೩,೩೦೦ | ೨೦೦ | ೬೩೦ | ೫೦೦ | ೪,೬೩೦ | ೩೦೦ |
| ರಜಾದಿನ/ವಾರಾಂತ್ಯ | | | | | | |
| ಪೂರ್ತಿದಿನ ಬೆ. ೯.೦೦–೯.೦೦ | ೬,೮೦೦ | ೨೦೦ | ೧೨೬೦ | ೫೦೦ | ೮,೭೬೦ | ೩೦೦ |
| ಅರ್ಧದಿನ ಬೆ ೯.೦೦–೨.೦೦ ಮ ೩.೩೦–೯.೦೦ | ೩,೮೦೦ | ೨೦೦ | ೭೨೦ | ೫೦೦ | ೫,೨೨೦ | ೩೦೦ |

ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರವು ಸುಸಜ್ಜಿತ ಹಾಗೂ ಅತ್ಯಾಧುನಿಕ ವ್ಯವಸ್ಥೆಯುಳ್ಳದ್ದಾಗಿದ್ದು, ನವೀಕೃತವಾಗಿದೆ. ಅದರ ಬಾಡಿಗೆ ನೀಡುವ ಬಗ್ಗೆ ಹಾಗೂ ರಿಯಾಯತಿಯ ಬಗ್ಗೆ ಈ ಕೆಳಕಂಡಂತಿದೆ.

| ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರದ ಬಾಡಿಗೆ ಮೊತ್ತ | ಪೂರ್ತಿದಿನ | ಅರ್ಧದಿನ | ರಿಯಾಯಿತಿ |
|---|---|---|---|
| ೧. ಕ.ಸಾ.ಪ. ದ ಅಂಗಸಂಸ್ಥೆಗಳಿಗೆ, ಪುಸ್ತಕ ಬಿಡುಗಡೆ, ವಿಚಾರ ಸಂಕೀರ್ಣ, ಉಪನ್ಯಾಸ, ಕವಿಗೋಷ್ಠಿ, ಶ್ರದ್ಧಾಂಜಲಿ ಮತ್ತು ಸುಗಮ ಸಂಗೀತ | ೨೦,೦೦೦ | ೧೦,೦೦೦ | ೧೦% ರಿಯಾಯಿತಿ |
| ೨. ವಾರ್ಷಿಕೋತ್ಸವ, ಸನ್ಮಾನ, ಅಭಿನಂದನೆ, ಖಾಸಗಿ ಕಾರ್ಯಕ್ರಮ, ಶಾಲಾ ಹಾಗೂ ಕಾಲೇಜು ಕಾರ್ಯಕ್ರಮ, ನಾಟಕ, ಸಭೆಗಳಿಗೆ | ೨೦,೦೦೦ | ೧೦,೦೦೦ | ರಿಯಾಯಿತಿ ಇಲ್ಲ |
| ೩. ಅನುದಾನ ಹಾಗು ಸಹಯೋಗ ಪಡೆದು ನಡೆಸುವ ಕಾರ್ಯಕ್ರಮಗಳಿಗೆ | ೨೫,೦೦೦ | ೧೫,೦೦೦ | ರಿಯಾಯಿತಿ ಇಲ್ಲ |
| ಈ ಮೇಲ್ಕಂಡ ಕಾರ್ಯಕ್ರಮಗಳಿಗೆ ಒಳ ಆವರಣ ಶುಲ್ಕ ಮತ್ತು ಹೊರ ಆವರಣ ಶುಲ್ಕವಾಗಿ ತ್ಯಾಜ್ಯ ವಸ್ತು ವಿಲೇವಾರಿಗಾಗಿ ಬಾಬ್ತು ಸೇರಿದಂತೆ ರೂ ೫೦೦–೦೦ ಪ್ರತ್ಯೇಕವಾಗಿ ಪಡಿಯುವುದು. | | | |

ಸಭಾ ಮಂಟಪದ ನಿಯಮಗಳನ್ವಯ ಕ್ರ.ಸಂ. ೧೨ರಲ್ಲಿ "ಪರಿಷತ್ತಿನ ಸದಸ್ಯ ಅಂಗ ಸಂಸ್ಥೆಗಳಿಗೆ ಶ್ರೀ ಕೃಷ್ಣರಾಜ ಪರಿಷತ್ ಮಂದಿರದ ಬಾಡಿಗೆ ಮೊತ್ತದಲ್ಲಿ ೧೦% ರಿಯಾಯತಿ, ಕುವೆಂಪು ಸಭಾಂಗಣ ರೂ. ೨೦೦.೦೦ ಮತ್ತು ಅಕ್ಕಮಹಾದೇವಿ ಸಭಾಂಗಣದಲ್ಲಿ ರೂ. ೫೦೦.೦೦ ರಿಯಾಯಿತಿ ನೀಡಲಾಗುವುದು.

ಸಭಾಮಂಟಪಗಳ ದರಗಳನ್ನು ಹಾಗೂ ಪುಸ್ತಕಗಳ ದರಗಳನ್ನು ರಿಯಾಯಿತಿ ದರಗಳಲ್ಲಿ ನೀಡುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರುತ್ತದೆ. ಅದೇ ರೀತಿ ಕಾಲಕಾಲಕ್ಕೆ ದರಗಳನ್ನು ಹೆಚ್ಚಿಸುವ ಅಧಿಕಾರ ಅಧ್ಯಕ್ಷರಿಗೆ ಇರುತ್ತದೆ.

**೧೩. ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹಿತಿಗೆ ಸಂಬಂಧಿಸಿದ ವಿವರಗಳು ಕಲಂ ೪(೧) (ಬಿ) (XIV)**

| ಲಭ್ಯವಿರುವ ಸೇವೆಗಳು | ಲಭ್ಯವಿರುವ ವಿಳಾಸ | ವಿಷಯ/ಟೈಟಲ್ | ಮಾಹಿತಿ ಹೊಂದಿದ ಅಧಿಕಾರಿ/ಸಿಬ್ಬಂದಿ ವಿವರ |
|---|---|---|---|
| ಲೆಕ್ಕಪತ್ರ ವಿಭಾಗ – ಸಿಬ್ಬಂದಿ ವೇತನ, ಠೇವಣಿಗಳ ಮಾಹಿತಿ ನಿರ್ವಹಣೆ | – | – | ಶ್ರೀ ಪಾರ್ಶ್ವನಾಥ, ವ್ಯವಸ್ಥಾಪಕರು (ಪ್ರಭಾರ) |
| ಸದಸ್ಯತ್ವ/ಸ್ಮಾರ್ಟ್ ಕಾರ್ಡ್ ನಿರ್ವಹಣೆ | | | |
| ಸಭಾಂಗಣ ನಿರ್ವಹಣೆ ಮತ್ತು ಬಾಡಿಗೆ ಬಗ್ಗೆ | | | |
| ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರತಿನಿಧಿ/ಪುಸ್ತಕ ಹಾಗೂ ವಾಣಿಜ್ಯ ಮಳಿಗೆಗಳ ನೊಂದಣಿ | | | |
| ಸಾಮಾಜಿಕ ಜಾಲತಾಣ/ಕ.ಸಾ.ಪ.ದ ಅಂತರ್ಜಾಲ/ದರ ಪಟ್ಟಿ ಆಹ್ವಾನ | | | ಶ್ರೀ ಬಿ. ರವಿಕುಮಾರ್ ಪ್ರಥಮದರ್ಜೆ ಸಹಾಯಕರು |
| ದತ್ತಿ ವಿಭಾಗದ ಮಾಹಿತಿ ನಿರ್ವಹಣೆ | | | ಶ್ರೀಮತಿ ಶಾಂತಕುಮಾರಿ ಅಧೀಕ್ಷಕರು |
| ಪ್ರಕಟಣಾ ವಿಭಾಗ – ಮಾಧ್ಯಮ/ಪತ್ರಿಕೆ ಪ್ರಕಟಣೆಗಳ ನಿರ್ವಹಣೆ ಹಾಗೂ ಕನ್ನಡ ನುಡಿ ಪತ್ರಿಕೆ ನಿರ್ವಹಣೆ | | | ಶ್ರೀ ಎನ್.ಎಸ್. ಶ್ರೀಧರಮೂರ್ತಿ ಸಂಚಾಲಕರು |
| ಎಲ್ಲಾ ಶಾಖೆಯ ವಿಷಯಗಳ ಕಡತಗಳು | – | – | ಎಲ್ಲಾ ಶಾಖೆಯ ವಿಷಯ ನಿರ್ವಾಹಕರು |

**೧೪. ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು (ಕಲಂ ೪ (೧)(ಬಿ) (XV)**

**ಸರಸ್ವತೀ ಭಂಡಾರ**

ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಮತ್ತು ವಾಚನಾಲಯವನ್ನು ನಿರ್ವಹಿಸಲಾಗುತ್ತಿದೆ. ಈ ಗ್ರಂಥಾಲಯದಲ್ಲಿ ದಿನಪತ್ರಿಕೆಗಳು, ನಿಯತಕಾಲಿಕೆಗಳು, ಮಕ್ಕಳ ಪುಸ್ತಕಗಳು, ಸಂಶೋಧನಾ ಗ್ರಂಥಗಳು, ಹಾಗೂ ತಾಳೆಗರಿಯ ಹಸ್ತಪ್ರತಿಗಳನ್ನು ಇರಿಸಲಾಗಿದೆ. ಇದಲ್ಲದೆ ಕಾದಂಬರಿಗಳು, ಪರಿಷತ್ತಿನ ದತ್ತಿ ಪ್ರಶಸ್ತಿಗಳಿಗಾಗಿ ಬರುವ ಪುಸ್ತಕಗಳು, ಖರೀದಿಸುವ ಪುಸ್ತಕಗಳು, ಪರಿಷತ್ತಿನ ವತಿಯಿಂದ ಪ್ರಕಟವಾದ ಪುಸ್ತಕಗಳು ಹಾಗೂ

ಇನ್ನಿತರ ಪುಸ್ತಕಗಳು ಲಭ್ಯವಿರುತ್ತವೆ. ಸಾರ್ವಜನಿಕರು ಗ್ರಂಥಾಲಯವು ತೆರೆದಿರುವ ಸಮಯದಲ್ಲಿ ಅವುಗಳ ಉಪಯೋಗವನ್ನು ಪಡೆಯಬಹುದಾಗಿದೆ. ಆದರೆ ಸರಸ್ವತೀ ಭಂಡಾರದ (ಗ್ರಂಥಾಲಯದ) ಸದಸ್ಯರು ಮಾತ್ರ ಎರಡು ಪುಸ್ತಕಗಳನ್ನು ಎರವಲು ಪಡೆದು ನಿಯಮಾನುಸಾರ ತಮ್ಮ ಬಳಿ ಇಟ್ಟುಕೊಳ್ಳಬಹುದಾಗಿದೆ.

ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಓದುಗರ ಜ್ಞಾನದಾಹವನ್ನು ಈಡೇರಿಸಬೇಕು ಮತ್ತು ಎಲ್ಲಾ ಕನ್ನಡ ಪುಸ್ತಕಗಳು ಒಂದೆಡೆ ಸಿಗಬೇಕು ಎಂಬ ಮಹದೋದ್ದೇಶದಿಂದ ೧೯೧೫ರಲ್ಲಿ ಸರಸ್ವತೀಭಂಡಾರವನ್ನು ಪ್ರಾರಂಭಿಸಲಾಯಿತು. ಈಗ ಶತಮಾನವನ್ನು ಪೂರೈಸಿ ೧೧೦ನೇ ವಸಂತಕ್ಕೆ ಕಾಲಿಟ್ಟಿದೆ ಹಾಗೂ ಇಂದಿಗೂ ತನ್ನ ಹಿರಿಮೆ ಗರಿಮೆಯನ್ನು ಕಾಪಾಡಿಕೊಂಡು ಬಂದಿದೆ.

ಸರಸ್ವತೀ ಭಂಡಾರದ ೧೦೯ ವಸಂತಗಳ ಸುದೀರ್ಘ ಅವಧಿಯಲ್ಲಿ ವಿದ್ವಾಂಸರು, ಸಂಶೋಧಕರು, ವಿದ್ಯಾರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷೆಯ ಅಭ್ಯರ್ಥಿಗಳು ಹಾಗೂ ಗಣ್ಯಾತಿಗಣ್ಯರು ಇಲ್ಲಿನ ಜ್ಞಾನಭಂಡಾರದ ಉಪಯೋಗವನ್ನು ಪಡೆದುಕೊಂಡಿದ್ದಾರೆ.

ದಿನಪತ್ರಿಕೆಗಳು, ನಿಯತಕಾಲಿಕೆಗಳು, ಮಕ್ಕಳ ಪುಸ್ತಕಗಳು, ಸಂಶೋಧನಾ ಗ್ರಂಥಗಳು ಹಾಗೂ ತಾಳೇಗರಿಯ ಹಸ್ತಪ್ರತಿಗಳನ್ನು ಒಳಗೊಂಡಿರುವ ವಿಸ್ತೃತ ಗ್ರಂಥಾಲಯವಾದ ಸರಸ್ವತೀ ಭಂಡಾರದಲ್ಲಿ ನೂರು ವರ್ಷಗಳಿಗೂ ಹಿಂದಿನ ಪ್ರಾಚೀನವಾದ, ಅಮೂಲ್ಯ ಹಾಗೂ ಅಪರೂಪದ ಪುಸ್ತಕಗಳ ನಿಧಿಯೇ ಅಡಗಿದೆ. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಕನ್ನಡ ನುಡಿ, ಪ್ರಬುದ್ಧ ಕರ್ನಾಟಕ, ಪ್ರಜಾಮತ, ಶರಣ ಸಂಪದ, ಸುಧಾ, ತರಂಗ, ಕರ್ಮವೀರ ಮುಂತಾದ ೨೦೦ಕ್ಕೂ ಅಧಿಕ ನಿಯತಕಾಲಿಕೆಗಳ ಹಳೆಯ ಸಂಪುಟಗಳನ್ನು ರಟ್ಟು ಕಟ್ಟಿಸಿ ಇರಿಸಲಾಗಿದೆ.

ಪ್ರಸ್ತುತ ೨೦೨೩ ಮಾರ್ಚ್ ೩೧ ರ ಅಂತ್ಯಕ್ಕೆ ಸರಸ್ವತೀ ಭಂಡಾರದಲ್ಲಿ ೧,೦೯,೯೦೬ (ಒಂದು ಲಕ್ಷದ ಒಂಬೋತ್ತುಸಾವಿರದ ಒಂಬೈನೂರ ಆರು) ಪುಸ್ತಕಗಳಿವೆ. ಕನ್ನಡ ನುಡಿ ಪತ್ರಿಕೆಗೆ ವಿಮರ್ಶೆಗಾಗಿ, ಸಾದರ ಸ್ವೀಕಾರಕ್ಕಾಗಿ, ಪರಿಷತ್ತಿನ ದತ್ತಿ ಪ್ರಶಸ್ತಿಗಳಿಗಾಗಿ ಬರುವ ಪುಸ್ತಕಗಳು, ಖರೀದಿಸುವ ಪುಸ್ತಕಗಳು, ನಗರ ಕೇಂದ್ರ ಗ್ರಂಥಾಲಯ ಪಶ್ಚಿಮ ವಲಯ ನೀಡುವ ಪುಸ್ತಕಗಳು ಹಾಗೂ ಪರಿಷತ್ತಿನ ಪ್ರಕಟಣೆಗಳು ಸರಸ್ವತೀ ಭಂಡಾರದಲ್ಲಿ ಸಂಗ್ರಹವಾಗುತ್ತಿವೆ.

ಸರಸ್ವತೀ ಭಂಡಾರದಲ್ಲಿ ಪ್ರಸ್ತುತ ೧,೧೭೦ (ಒಂದು ಸಾವಿರದ ಒಂದನೂರ ಎಪ್ಪತ್ತು) ಮಂದಿ ಸದಸ್ಯರಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರು ಮಾತ್ರ ಸರಸ್ವತೀಭಂಡಾರದ ಸದಸ್ಯತ್ವ ಪಡೆಯಬಹುದು. ಇದಕ್ಕಾಗಿ ರೂ.೨೦೦ ಠೇವಣಿ, ಒಂದು ಫೋಟೋ ಹಾಗೂ ವಿಳಾಸ ದೃಢೀಕರಣ ನಕಲು ಪ್ರತಿ ನೀಡಬೇಕು. ಸದಸ್ಯತ್ವ ಪಡೆದ ನಂತರ ಎರಡು ಎರವಲು ಚೀಟಿ ನೀಡಲಾಗುವುದು. ಚೀಟಿ ಪಡೆದ ಸದಸ್ಯರು ಎರಡು ಪುಸ್ತಕಗಳನ್ನು ಎರವಲಾಗಿ ಪಡೆದು ೧೫ ದಿನಗಳವರೆಗೆ ತಮ್ಮ ಬಳಿ ಇಟ್ಟುಕೊಳ್ಳಬಹುದು. ನಂತರ ಹಿಂತಿರುಗಿಸಲು ತಡಮಾಡಿದರೆ ದಿನವೊಂದಕ್ಕೆ ಒಂದು ರೂಪಾಯಿಯಂತೆ ದಂಡ ಶುಲ್ಕ ವಿಧಿಸಲಾಗುವುದು.

ಸರಸ್ವತೀ ಭಂಡಾರದಲ್ಲಿ ಸಂಶೋಧನಾ ವಿಭಾಗ, ವಾಚನಾಲಯ ಮತು ಪುಸ್ತಕ ಎರವಲು ವಿಭಾಗ ಎಂಬ ಪ್ರಮುಖ ವಿಭಾಗಗಳಿವೆ. ಸಂಶೋಧನಾ ವಿಭಾಗದ ಪುಸ್ತಕಗಳನ್ನು ಎರವಲು ನೀಡಲಾಗುವುದಿಲ್ಲ, ಇಲ್ಲೇ ಕುಳಿತು ಪರಾಮರ್ಶಿಸಬೇಕು.

**ಸರಸ್ವತೀ ಭಂಡಾರದ ಸಮಯ:**

ಬೆಳಿಗ್ಗೆ ೧೦.೦೦ ರಿಂದ ಸಂಜೆ ೫.೦೦ ಗಂಟೆ ರವರೆಗೆ.

**ಊಟದ ವಿರಾಮ:** ಮಧ್ಯಾಹ್ನ ೧.೩೦ ರಿಂದ ೨.೧೫ ರವರೆಗೆ ಇರುತ್ತದೆ,

ಸರ್ಕಾರದಿಂದ ಅಧಿಕೃತವಾಗಿ ಘೋಷಿಸಿರುವ ರಜೆಗಳು, ೪ನೇ ಶನಿವಾರ ಹಾಗೂ ಎಲ್ಲಾ ಭಾನುವಾರಗಳು ಸರಸ್ವತೀಭಂಡಾರಕ್ಕೆ ರಜೆ ಇರುತ್ತದೆ.

**ಪುಸ್ತಕ ಮಾರಾಟ ವಿಭಾಗ:**

ಪುಸ್ತಕ ಮಾರಾಟ ವಿಭಾಗವು ೧೯೬೬–೧೯೭೮ರ ಅವಧಿಯಲ್ಲಿ ಪ್ರಾರಂಭವಾಯಿತು. ಈ ವಿಭಾಗದಲ್ಲಿ ಹಳಗನ್ನಡ ಗದ್ಯಾನುವಾದಗಳು, ಕನ್ನಡ ರತ್ನಕೋಶ, ಸಂಕ್ಷಿಪ್ತ ಕನ್ನಡ ನಿಘಂಟು, ಸಂಕ್ಷಿಪ್ತ ಇಂಗ್ಲಿಷ್ ನಿಘಂಟು ಹಾಗೂ ಬೃಹತ್ ಕನ್ನಡ–ಕನ್ನಡ ನಿಘಂಟು (೦೮ ಸಂಪುಟಗಳು), ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು, ಸಮ್ಮೇಳನಾಧ್ಯಕ್ಷರಗಳ ಭಾಷಣಗಳು, ಮಹಿಳಾ ಸಾಹಿತ್ಯ ಸಂಪುಟಗಳು, ದಲಿತ ಸಾಹಿತ್ಯ ಸಂಪುಟಗಳು, ಶತಮಾನೋತ್ಸವ ಮಾಲಿಕೆ, ಜೀವನ ಚರಿತ್ರೆಗಳು, ಕ.ಸಾ.ಪ.

ಪರೀಕ್ಷೆ ಪುಸ್ತಕಗಳು, ವಿದ್ಯಾರ್ಥಿಗಳಿಗೆ, ಜನಸಾಮಾನ್ಯರಿಗೆ, ಭಾಷಾಭ್ಯಾಸಿಗಳಿಗೆ, ಸಂಶೋಧಕರಿಗೆ, ವಿದ್ವಾಂಸರಿಗೆ, ಉಪಯುಕ್ತವಾಗುವ ಹತ್ತಾರು ನಿಘಂಟುಗಳನ್ನು ಪರಿಷತ್ತಿನ ವತಿಯಿಂದ ಪ್ರಕಟಿಸಲಾಗಿದ್ದು ಮಾರಾಟಕ್ಕೆ ಲಭ್ಯವಿರುತ್ತವೆ. ಮಾರಾಟ ವಿಭಾಗದಲ್ಲಿ ಲಭ್ಯವಿರುವ ಆಯ್ದ ಪುಸ್ತಕಗಳಿಗೆ ಕ.ಸಾ.ಪ.ದ ಸದಸ್ಯರಿಗೆ ಶೇ. ೩೦% ರಷ್ಟು ಮತ್ತು ಸಾರ್ವಜನಿಕರಿಗೆ ಶೇ. ೧೦% ರಷ್ಟು ರಿಯಾಯತಿಯನ್ನು ನೀಡಲಾಗುತ್ತಿದೆ.

ಅಲ್ಲದೇ ದಿನಾಂಕ: ೨೨–೦೪–೨೦೨೪ರ ಕಛೇರಿ ಆದೇಶದನ್ವಯ ವಿಶೇಷವಾಗಿ ಈ ಕೆಳಕಂಡ ತಿಂಗಳುಗಳಲ್ಲಿ ರಿಯಾಯಿತಿಯನ್ನು ನೀಡಲಾಗಿದೆ. ದಿನಾಂಕ: ೧೦–೦೪–೨೦೨೪ ರಿಂದ ಎಲ್ಲಾ ದಿನಗಳಂದು ಬೆಳಿಗ್ಗೆ ೧೦.೦೦ ರಿಂದ ಸಂಜೆ ೦೫.೩೦ರವರೆಗೆ ಪುಸ್ತಕ ಮಾರಾಟ ವಿಭಾಗವು ತೆರೆದಿರುತ್ತದೆ.

**<u>೧೫. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರಗಳನ್ನು ನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿ ವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ ಪರಿಷ್ಕರಿಸತಕ್ಕದ್ದು ಕಲಂ ೪(೧) (ಬಿ) (XVI)</u>**

| ಕ್ರ. ಸಂ. | ಶಾಖೆಗಳ ಹೆಸರು | ಮಾಹಿತಿ ಹಕ್ಕು ಕಾಯ್ದೆ ಸೆಕ್ಷನ್ ೫(೧)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ | ಮಾಹಿತಿಹಕ್ಕು ಕಾಯ್ದೆ ಸೆಕ್ಷನ್ ೧೯(೧)ರ ಪ್ರಕಾರ ಮೇಲ್ಮನವಿ ಪ್ರಾಧಿಕಾರ |
|---|---|---|---|
| ೧) | ೧. ಅಧ್ಯಕ್ಷರ ಆಪ್ತಶಾಖೆ<br>೨. ಲೆಕ್ಕಪತ್ರ ಶಾಖೆ<br>೩. ದಾಸ್ತಾನು ಶಾಖೆ<br>೪. ಸಿಬ್ಬಂದಿ ಸೇವಾ ಶಾಖೆ<br>೫. ಮಾರಾಟ ಶಾಖೆ<br>೬. ಬಿ.ಎಂ.ಶ್ರೀ. ಅಚ್ಚುಕೂಟ ಶಾಖೆ<br>೭. ಸರಸ್ವತೀ ಭಂಡಾರ ಮತ್ತು ವಾಚನಾಲಯ (ಗ್ರಂಥಾಲಯ)<br>೮. ಸಂಶೋಧನಾ ಶಾಖೆ<br>೯. ರಸೀತಿ ಶಾಖೆ<br>೧೦. ರವಾನೆ ಶಾಖೆ<br>೧೧. ಸದಸ್ಯತ್ವ ಶಾಖೆ<br>೧೨. ದತ್ತಿ ಶಾಖೆ<br>೧೩. ಪ್ರಕಟಣಾ ಶಾಖೆ<br>೧೪. ಪರೀಕ್ಷಾ ಶಾಖೆ<br>೧೫. ಗಣಕಯಂತ್ರ ಶಾಖೆ | ಶ್ರೀ ಆರ್.ಪಿ. ಪಾರ್ಶ್ವನಾಥ<br>ವ್ಯವಸ್ಥಾಪಕರು (ಪ್ರಭಾರ) | ಶ್ರೀ ಬಿ.ಎಂ. ಪಟೇಲ್ ಪಾಂಡು<br>ಗೌರವ ಕೋಶಾಧ್ಯಕ್ಷರು |

**<u>೧೬. ಇತರೆ ಮಾಹಿತಿ: ಕಲಂ (೪) (೧) (ಬಿ) (XVII)</u>**

ಬೇರೆ ಯಾವುದಾದರೂ ಮಾಹಿತಿಗಳು ಸೇರ್ಪಡೆ/ಬದಲಾವಣೆಯ ಅವಶ್ಯಕತೆಯಿದ್ದಲ್ಲಿ ಅವನ್ನು ಪರಿಷ್ಕರಿಸಿ ಕಾಲ ಕಾಲಕ್ಕೆ ಅಳವಡಿಸಲಾಗುವುದು.

**(ನಾಡೋಜ ಡಾ. ಮಹೇಶ ಜೋಶಿ)**
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು